**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಎರಡನೇ ಅಧಿವೇಶನ**

# ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–26)**

ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ 65)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂ. 65)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,-

(i) (ಎ) ಬಾಬುವಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಎ) ಉಪ ಮುಖ್ಯಮಂತ್ರಿ- ಪದನಿಮಿತ್ತ ಸದಸ್ಯರು."

(ii) (ಬಿ) ಬಾಬುವಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಬಿಬಿ) ಬುಡಕಟ್ಟು ಕಲ್ಯಾಣ ಮಂತ್ರಿ- ಪದನಿಮಿತ್ತ ಸದಸ್ಯರು."

**3. 5ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿನ (1)ನೇ ಬಾಬುವಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಬುಡಕಟ್ಟು ಕಲ್ಯಾಣ ಮಂತ್ರಿ- ಉಪಾಧ್ಯಕ್ಷರು."

**4. 7ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 7ನೇ ಪ್ರಕರಣದ (ಡಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ನ್ನು,-

(i) 2023-24ರ ಆಯವ್ಯಯ ಭಾಷಣದ (ಖಂಡಿಕೆ ಸಂಖ್ಯೆ.139) ರಲ್ಲಿನ ಪ್ರಸ್ತಾವಗಳನ್ನು ಜಾರಿಗೆ ತರಲು; ಮತ್ತು

(ii) (ಎ) ಉಪಮುಖ್ಯ ಮಂತ್ರಿ ಮತ್ತು ಬುಡಕಟ್ಟು ಕಲ್ಯಾಣ ಮಂತ್ರಿಯವರನ್ನು ರಾಜ್ಯ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ಪದನಿಮಿತ್ತ ಸದಸ್ಯರಾಗಿ ಸೇರಿಸಲು; ಮತ್ತು

(ಬಿ) ಬುಡಕಟ್ಟು ಕಲ್ಯಾಣ ಮಂತ್ರಿಯವರನ್ನು ಅನುಸೂಚಿತ ಜಾತಿಗಳ ಉಪಹಂಚಿಕೆ/ಬುಡಕಟ್ಟು ಉಪಹಂಚಿಕೆ ನೋಡಲ್ ಏಜೆನ್ಸಿಗೆ ಉಪಾಧ್ಯಕ್ಷರಾಗಿ ಸೇರಿಸಲು,

- ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ.ಹೆಚ್.ಸಿ.ಮಹಾದೇವಪ್ಪ**
ಸಮಾಜ ಕಲ್ಯಾಣ ಮಂತ್ರಿಗಳು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

**ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ)ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 65)ರ ಉದ್ಧೃತ ಭಾಗ**

**XX XX XX**

**3. ರಾಜ್ಯ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತು.-** (1) ಈ ಅಧಿನಿಯಮವು ಪ್ರಾರಂಭವಾದ ನಂತರ, ಸಾಧ್ಯವಾದಷ್ಟು ಬೇಗನೆ, ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿನಿಯಮದ ಮೇರೆಗೆ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ರಚಿಸತಕ್ಕದ್ದು.

(2) ರಾಜ್ಯ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಮುಖ್ಯಮಂತ್ರಿಗಳು | - ಅಧ್ಯಕ್ಷರು |
| (ಬಿ) | ಸಮಾಜ ಕಲ್ಯಾಣ ಸಚಿವರು | - ಉಪಾಧ್ಯಕ್ಷರು |
| (ಸಿ) | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು | - ಪದನಿಮಿತ್ತ ಸದಸ್ಯರು |
| (ಡಿ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | - ಪದನಿಮಿತ್ತ ಸದಸ್ಯರು |
| (ಇ) | ಉನ್ನತ ಶಿಕ್ಷಣ ಸಚಿವರು | - ಪದನಿಮಿತ್ತ ಸದಸ್ಯರು |
| (ಎಫ್) | ಕಂದಾಯ ಸಚಿವರು | - ಪದನಿಮಿತ್ತ ಸದಸ್ಯರು |
| (ಜಿ) | ಸರ್ಕಾರವು ನಾಮನಿರ್ದೇಶಿಸಿದಂಥ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಕ್ಕೆ ಸೇರಿದ ಐದು ಜನ ವಿಧಾನಸಭಾ ಸದಸ್ಯರು ಅಥವಾ ವಿಧಾನಪರಿಷತ್ ಸದಸ್ಯರು ಅಥವಾ ಸಂಸತ್ ಸದಸ್ಯರು | -ಸದಸ್ಯರು |
| (ಜಿಎ) | ಸರ್ಕಾರದ ಮುಖ್ಯಕಾರ್ಯದರ್ಶಿ | - ಪದನಿಮಿತ್ತ ಸದಸ್ಯರು |
| (ಎಚ್) | ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | - ಪದನಿಮಿತ್ತ ಸದಸ್ಯರು |
| (ಐ) | ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | - ಪದನಿಮಿತ್ತ ಸದಸ್ಯರು |
| (ಜೆ) | ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ | - ಪದನಿಮಿತ್ತ ಸದಸ್ಯರು |
| (ಕೆ) | ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | - ಪದನಿಮಿತ್ತ ಸದಸ್ಯ ಕಾರ್ಯದರ್ಶಿ. |

**XX XX XX**

**5. ನೋಡಲ್ ಏಜೆನ್ಸಿ ಹಾಗೂ ನೋಡಲ್ ಇಲಾಖೆ.-** (1) ಅನುಸೂಚಿತ ಜಾತಿಗಳ ಉಪಹಂಚಿಕೆ/ಬುಡಕಟ್ಟು ಉಪಹಂಚಿಕೆ ನೋಡಲ್ ಏಜೆನ್ಸಿಯು, ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (1) | ಸಮಾಜ ಕಲ್ಯಾಣ ಸಚಿವರು | - ಅಧ್ಯಕ್ಷರು |
| (2) | ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | - ಪದನಿಮಿತ್ತ ಸದಸ್ಯರು |
| (3) | ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | - ಪದನಿಮಿತ್ತ ಸದಸ್ಯರು |
| (4) | ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | - ಪದನಿಮಿತ್ತ ಸದಸ್ಯರು |
| (5) | ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ | - ಪದನಿಮಿತ್ತ ಸದಸ್ಯರು |
| (6) | ಯಾವ ಇಲಾಖೆಗಳಿಗೆ ಹಂಚಿಕೆಗಳನ್ನು ಮಾಡಬೇಕಾಗಿದೆಯೋ ಆ ಇತರ ಎಲ್ಲಾ ಇಲಾಖೆಗಳ ವಿಶೇಷ ಆಹ್ವಾನಿತರಾಗಿರತಕ್ಕ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರು | - ಪದನಿಮಿತ್ತ ಸದಸ್ಯರು |
| (7) | ನಿರ್ದೇಶಕರು, ಅನುಸೂಚಿತ ಪಂಗಡಗಳ ಇಲಾಖೆ | - ಸಂಚಾಲಕರು-ಟಿಎಸ್‌ಪಿ |
| (8) | ಪದನಿಮಿತ್ತ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | - ಸಂಚಾಲಕರು-ಎಸ್‌ಸಿಎಸ್‌ಪಿ |

**XX XX XX**

**7. ಉಪ-ಯೋಜನೆಯಲ್ಲಿ ಸೇರಿಸಲಾಗಿರುವ ಅನುಸೂಚಿತ ಜಾತಿಗಳ ಉಪಹಂಚಿಕೆ/ಬುಡಕಟ್ಟು ಉಪಹಂಚಿಕೆ ಸ್ಕೀಮುಗಳಿಗೆ ಹಣಕಾಸು ಒದಗಿಸುವುದಕ್ಕಾಗಿ ಅನುಸೂಚಿತ ಜಾತಿಗಳ ಉಪಹಂಚಿಕೆ ನಿಧಿಯ ಮತ್ತು ಬುಡಕಟ್ಟು ಉಪ-ಯೋಜನೆ ನಿಧಿಯ ಹಂಚಿಕೆ.-** ನೋಡಲ್ ಏಜೆನ್ಸಿಯು, ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪಹಂಚಿಕೆ ಸ್ಕೀಮುಗಳಿಗೆ ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪಹಂಚಿಕೆ ನಿಧಿಯ ಹಂಚಿಕೆಯನ್ನು ಸೂಚಿಸುವಾಗ, ಈ ಕೆಳಕಂಡ ಸೂತ್ರಗಳನ್ನು ಅನುಸರಿಸತಕ್ಕದ್ದು, ಎಂದರೆ:-

(ಎ) ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗೆ ಅಥವಾ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಕುಟುಂಬಗಳಿಗೆ ವಿಶೇಷವಾಗಿ ಪ್ರಯೋಜನವಾಗುವ ಸ್ಕೀಮುಗಳಿಗೆ ಶೇಕಡ 100 ರಷ್ಟು ಸ್ಕೀಮು ವೆಚ್ಚವನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಅದನ್ನು ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪಹಂಚಿಕೆ ನಿಧಿಯ ಅಡಿಯಲ್ಲಿ ಲೆಕ್ಕ ತೋರಿಸತಕ್ಕದ್ದು;

(ಬಿ) ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡದ ವಾಸಸ್ಥಳಗಳಿಗೆ ಪ್ರಯೋಜನ ಕಲ್ಪಿಸುವ ಸ್ಕೀಮುಗಳಿಗಾಗಿ ಶೇಕಡಾ 100 ರಷ್ಟು ಸ್ಕೀಮು ವೆಚ್ಚವನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಅದನ್ನು ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪಹಂಚಿಕೆ ನಿಧಿಯ ಅಡಿಯಲ್ಲಿ ಲೆಕ್ಕ ತೋರಿಸತಕ್ಕದ್ದು. ಇತರ ವಾಸಸ್ಥಳಗಳ ಸಂದರ್ಭದಲ್ಲಿ, ಆ ವೆಚ್ಚವನ್ನು ಅನುಸೂಚಿತ ಜಾತಿಗಳು ಅಥವಾ

ಅನುಸೂಚಿತ ಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಅನುಸೂಚಿತ ಜಾತಿ ಉಪಹಂಚಿಕೆಅಥವಾ ಬುಡಕಟ್ಟು ಉಪಹಂಚಿಕೆಅಡಿಯಲ್ಲಿ ಹಂಚಿಕೆ ಮಾಡತಕ್ಕದ್ದು ಮತ್ತು ಲೆಕ್ಕ ತೋರಿಸತಕ್ಕದ್ದು;

(ಸಿ) ``ಸಾಮಾನ್ಯ ಸಾಮಾಜಿಕ ವಲಯದ ಸ್ಕೀಮುಗಳು'' ಎಂದರೆ, ಉಪಹಂಚಿಕೆಸೇರಿಸಿರುವ ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳು, ಕಾರ್ಮಿಕ, ದೈಹಿಕ ವಿಕಲ ಚೇತನರ ಸ್ಕೀಮುಗಳು. ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡದ ವ್ಯಕ್ತಿಗಳಿಗೆ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡದ ಕುಟುಂಬಗಳಿಗೆ, ಇತರರ ಜೊತೆಯಲ್ಲಿ ಪ್ರಯೋಜನವಾಗುವಂತಿದ್ದರೆ, ಸ್ಕೀಮಿನ ವೆಚ್ಚವನ್ನು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡದ ಫಲಾನುಭವಿಗಳ ಜನ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಅನುಸೂಚಿತ ಜಾತಿಗಳ ಉಪಹಂಚಿಕೆಅಥವಾ ಬುಡಕಟ್ಟು ಉಪಹಂಚಿಕೆಅಡಿಯಲ್ಲಿ ಹಂಚಿಕೆ ಮಾಡತಕ್ಕದ್ದು ಮತ್ತು ಲೆಕ್ಕ ತೋರಿಸತಕ್ಕದ್ದು;

(ಡಿ) ವಿಭಜಿಸಲಾಗದ ಮೂಲ ಸೌಕರ್ಯ ಕಾಮಗಾರಿಗಳಿಗೆ ಸಂಬಂಧಿಸಿದಂ , ಸರ್ಕಾರವು ನಿರ್ಧರಿಸಬಹುದಾದಂಥ ಸ್ಕೀಮು ವೆಚ್ಚದ ಒಂದು ಭಾಗವನ್ನು ಅನುಕ್ರಮವಾಗಿ ಅನುಸೂಚಿತ ಜಾತಿಗಳ ಉಪಹಂಚಿಕೆಮತ್ತು ಬುಡಕಟ್ಟು ಉಪಹಂಚಿಕೆಒದಗಿಸಲಾಗಿದೆ ಎಂದು ಭಾವಿಸತಕ್ಕದ್ದು.

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 600, 08ನೇ ಡಿಸೆಂಬರ್ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SECOND SESSION**

# THE KARNATAKA SCHEDULED CASTES SUB-ALLOCATION AND TRIBAL SUB-ALLOCATION (PLANNING, ALLOCATION AND UTILIZATION OF FINANCIAL RESOURCES) (AMENDMENT) BILL, 2023

**(LA Bill No. 26 of 2023)**

A Bill further to amend the Karnataka Scheduled Castes sub-allocation and Tribal sub-allocation (Planning, Allocation and Utilization of Financial Resources) Act, 2013.

Whereas it is expedient further to amend the Karnataka Scheduled Castes sub-allocation and Tribal sub-allocation (Planning, Allocation and Utilization of Financial Resources) Act, 2013 (Karnataka Act 65 of 2013) for the purpose hereinafter appearing:

Be it enacted by the Karnataka State Legislature in the Seventy fourth year of the Republic of India as follows:-

**1. Short title and commencement.-** (1) This Act may be called the Karnataka Scheduled Castes sub-allocation and Tribal sub-allocation (Planning, Allocation and Utilization of Financial Resources) (Amendment) Act, 2023.

(2) It shall come into force at once.

**2. Amendment of section 3.-** In the Karnataka Scheduled Castes sub-allocation and Tribal sub-allocation (Planning, Allocation and Utilization of Financial Resources) Act, 2013 (Karnataka Act No. 65 of 2013) (hereinafter referred to as the Principal Act), in section 3, in sub-section (2),-

(i) after item (a), the following shall be inserted, namely:-

“(aa) The Deputy Chief Minister – Ex-officio Member.”

(ii) after item (b), the following shall be inserted, namely:-

“(bb) The Minister for Tribal Welfare – Ex-officio Member.”

**3. Amendment of section 5.-** In section 5 of the Principal Act, in sub-section (1), after item (1), the following shall be inserted, namely:-

“(1a) The Minister for Tribal Welfare – Vice Chairman.”

**4. Amendment of section 7.-** In section 7 of the Principal Act, clause (d) shall be omitted.

## STATEMENT OF OBJECTS AND REASONS

It is considered necessary to amend the Karnataka Scheduled Castes sub-allocation and Tribal sub-allocation (Planning, Allocation and Utilization of Financial Resources) Act, 2013,-

(i) to give effect to the proposals made in the Budget Speech of 2023-24 (Para No. 139); and

(ii) to include,-

(a) the Deputy Chief Minister and the Minister for Tribal Welfare as Ex-officio Members in the State Council for Development of the Scheduled Castes or the Scheduled Tribes; and

(b) the Minister for Tribal Welfare as the Vice-Chairman in the Nodal Agency for the Scheduled Castes sub-allocation or Tribal sub-allocation.

Hence, the Bill.

## FINANCIAL MEMORANDUM

There is no extra expenditure involved the proposed legislative measure.

**Dr. H.C. MAHADEVAPPA**
Minister for Social Welfare

**M.K. VISHALAKSHI**
Secretary
Karnataka Legislative Assembly

# ANNEXURE

**EXTRACT FROM THE KARNATAKA SCHEDULED CASTES SUB-ALLOCATION AND TRIBAL SUB-ALLOCATION (PLANNING, ALLOCATION AND UTILIZATION OF FINANCIAL RESOURCES) ACT, 2013 (KARNATAKA ACT 65 OF 2013)**

**XXX XXX XXX**

**3. The State Council for Development of the Scheduled Castes or the Scheduled Tribes.-** (1) As soon as may be, after the commencement of this Act, the Government shall, by notification, constitute a Council to-be known as the State Council for the Development of Scheduled Castes and Scheduled Tribes to exercise the powers conferred and to perform the functions assigned to it under the Act and the rules made there under.

(2) The State council shall consist of the following, namely:-

| | | |
|---|---|---|
| (a) | The Chief Minister | - Chairman |
| (b) | The Minister for Social Welfare | - Vice-Chairman |
| (c) | The Minister for Parliamentary Affairs and Legislation | - Ex-officio Member |
| (d) | The Minister for Rural Development and Panchayat Raj | - Ex-officio Member |
| (e) | The Minister for Higher Education | - Ex-officio Member |
| (f) | The Minister for Revenue | - Ex-officio Member |
| (g) | Five MLAs or MLCs or MPs belonging to SC/ST as nominated by the Government | - Members |
| (ga) | The Chief Secretary to Government | - Ex-officio member |
| (h) | The Development Commissioner & Additional Chief Secretary to Government | - Ex-officio Member |
| (i) | The Secretary/Principal Secretary, Finance Department | - Ex-officio Member |
| (j) | The Secretary/Principal Secretary, Planning Department | - Ex-officio Member |
| (k) | Secretary/Principal Secretary, Social Welfare Department | - Ex-officio Member Secretary |

**XXX XXX XXX**

**5. Nodal Agency and Nodal Department.-** (1) The Nodal Agency for the Scheduled Castes sub-allocation/Tribal sub-allocation shall consist of the following, namely:-

| | | |
|---|---|---|
| 1. | The Minister for Social Welfare | - Chairman |
| 2. | The Development Commissioner and Additional Chief Secretary to Government | - Ex-officio Member |
| 3. | The Secretary/Principal Secretary to Government Social Welfare Department | - Ex-officio Member Secretary |
| 4. | The Secretary/Principal Secretary to Government Finance Department | - Ex-officio Member |
| 5. | The Secretary/Principal Secretary to Government Planning Department | - Ex-officio Member |
| 6. | The Secretary/Principal Secretary of all other Departments for which allocations are to be made shall be Special Invitees | - Ex-officio Member |
| 7. | The Director, Scheduled Tribes Department | - Convener TSA |
| 8. | The Ex-officio Commissioner, Social Welfare Department | - Convener SCSA |

**XXX XXX XXX**

**7. Allocation of Scheduled Castes sub-allocation fund and Tribal sub-allocation fund for financing the Scheduled Castes sub-allocation /Tribal sub-allocation Schemes included in the sub-allocation .-** The Nodal Agency, while indicating allocation of the Scheduled Castes sub-allocation or Tribal sub-allocation Fund to the scheduled Castes sub-allocation or Tribal sub-allocation schemes shall follow the following norms namely:-

(a) for schemes exclusively benefiting the Scheduled Castes or the Scheduled Tribes individuals or the Scheduled Castes or Scheduled Tribes households 100% of scheme cost shall be allocated and accounted for under the Scheduled Castes sub-allocation or Tribal sub-allocation fund;

(b) for schemes benefiting the Scheduled Castes or the Scheduled Tribes habitations, 100% of scheme cost shall be allocated and accounted for under the Scheduled Castes sub-allocation or the Tribal sub-allocation fund. In case of other habitations the cost shall be allocated and accounted for under the Scheduled Caste sub-allocation or Tribal sub-allocation in proportion of the population of the Scheduled Castes or the Scheduled Tribes;

(c) for general social sector schemes, that is education, health, women and child, labour, physically handicapped included in the sub-allocation , benefiting the Scheduled Castes or Scheduled Tribes individuals or the Scheduled Castes or Scheduled Tribes

households, along with others, the scheme cost shall be allocated and accounted for under Scheduled Castes sub-allocation or Tribal sub-allocation, in proportion to the Scheduled Castes or Scheduled Tribe population;

(d) In respect of non-divisible infrastructure works, a portion of the scheme cost as may be determined by the Government shall be deemed to have been provided for the Scheduled Caste sub-allocation and Tribal sub-allocation respectively.

**XXX XXX XXX**

Govt. Press, Suvarna Vidhana Soudha, Belgavi, 08TH Dec, 2023, P7, W.D. , Copies 500